## ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 508 |
| ಸದಸ್ಯರ ಹೆಸರು: | : | ಶ್ರೀ ಎಸ್. ವಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು: | : | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ: | : | 30-01-2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿಗಳಿವೆ: (ಜಿಲ್ಲಾವಾರು ಮಾಹಿತಿ ನೀಡುವುದು); | ರಾಜ್ಯದಲ್ಲಿ ಒಟ್ಟು 69922 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ರಾಜ್ಯದಲ್ಲಿ ಪ್ರತಿ ಅಂಗನವಾಡಿಗೆ ಮಂಜೂರು ಮಾಡುವ ಹುದ್ದೆಗಳೆಷ್ಟು; | ಪ್ರತಿ ಅಂಗನವಾಡಿ ಕೇಂದ್ರಕ್ಕೆ ಒಂದು ಅಂಗನವಾಡಿ ಕಾರ್ಯಕರ್ತೆ ಹಾಗೂ ಒಂದು ಅಂಗನವಾಡಿ ಸಹಾಯಕಿ ಹುದ್ದೆಯನ್ನು ಮಂಜೂರು ಮಾಡಲಾಗುತ್ತದೆ. |
| ಇ) | ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಅವರಿಗೆ ಪ್ರತಿ ತಿಂಗಳು ನೀಡುವ ಗೌರವಧನ ಎಷ್ಟು ಮತ್ತು ಅದನ್ನು ಯಾವ ವರ್ಷದಿಂದ ನಿಗದಿಪಡಿಸಲಾಗಿದೆ; | ರಾಜ್ಯದಲ್ಲಿ 66,946 ಅಂಗನವಾಡಿ ಕಾರ್ಯಕರ್ತೆಯರು ಮತ್ತು 60,105 ಅಂಗನವಾಡಿ ಸಹಾಯಕಿಯರು ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ರೂ.12,000-12,500 ಹಾಗೂ ಅಂಗನವಾಡಿ ಸಹಾಯಕಿಯರಿಗೆ ಮಾಸಿಕ ಗೌರವಧನ ರೂ.7000-7,500 ಗಳನ್ನು ಅವರ ಸೇವಾ ಹಿರಿತನದ ಆಧಾರದ ಮೇಲೆ ಪಾವತಿಸಲಾಗುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ ರೂ.1000/- ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ.750/- ಗಳನ್ನು ಹೆಚ್ಚಿಸಲಾಗಿರುತ್ತದೆ. |
| ಈ) | ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗೌರವಧನ ಬದಲಾಗಿ ಇತರೆ ಸರ್ಕಾರಿ ನೌಕರರಿಗೆ ನೀಡುವಂತೆ ವೇತನ ಶ್ರೇಣಿ ನೀಡಲು ಸರ್ಕಾರಿ ಚಿಂತನೆ ನಡೆಸಿದೆಯೇ; | ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರಿ ನೌಕರರಿಗೆ ನೀಡುವಂತೆ ವೇತನ ಶ್ರೇಣಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

| | | |
|---|---|---|
| ಉ) | ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ನಿವೃತಿ ಹೊಂದುವ ಸಂದರ್ಭದಲ್ಲಿ ಕೊಡುತ್ತಿರುವ ಸೌಲಭ್ಯಗಳೇನು (ವಿವರವಾದ ಮಾಹಿತಿ ನೀಡುವುದು) | ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನಿವೃತ್ತಿ ನಂತರ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>• ಎನ್.ಪಿ.ಎಸ್. ಲೈಟ್ ಯೋಜನೆಯಡಿ ನೋಂದಣಿಯಾದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕ್ರಮವಾಗಿ ಮಾಸಿಕ ಗೌರವಧನದಲ್ಲಿ ರೂ.150/- ಹಾಗೂ ಸಹಾಯಕಿಯರಿಗೆ ರೂ.84/- ಗಳ ವಂತಿಗೆಯೊಂದಿಗೆ ಅಷ್ಟೇ ಪ್ರಮಾಣದ ಸರ್ಕಾರದ ವಂತಿಗೆಯನ್ನೂ ಸೇರಿಸಿ ಪಾವತಿಸಲಾಗುತ್ತಿದ್ದು, ನಿವೃತ್ತಿ ನಂತರದಲ್ಲಿ ಎನ್.ಪಿ.ಎಸ್. ಲೈಟ್ ಯೋಜನೆಯಡಿ ನಿವೃತ್ತಿ ಉಪಧನ ನೀಡಲಾಗುತ್ತಿದೆ.<br>• ಎನ್.ಪಿ.ಎಸ್. ಲೈಟ್ ಯೋಜನೆಯಿಂದ ವಂಚಿತರಾಗಿ ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಅನುಕ್ರಮವಾಗಿ ರೂ.50,000/- ಮತ್ತು ರೂ.30,000/- ಗಳನ್ನು ಇಡಿಗಂಟು ಯೋಜನೆಯಡಿ ಪಾವತಿಸಲಾಗುತ್ತಿದೆ.<br>• ಸರ್ಕಾರದ ಆದೇಶ ದಿನಾಂಕ: 21-06-2024 ರಲ್ಲಿ 2023-24 ನೇ ಸಾಲಿನ ಆರ್ಥಿಕ ವರ್ಷದಿಂದ ನಿವೃತ್ತಿ ಹೊಂದುವ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರು ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ "ನಿವೃತ್ತಿ ಉಪಧನ" (Gratuity) ಯೋಜನೆಯಡಿ ಸೇವಾ ಆಧಾರಿತ ಗ್ರಾಚ್ಯುಟಿ ನೀಡಲಾಗುತ್ತಿದೆ.<br>• ಕರ್ತವ್ಯನಿರತರಾಗಿದ್ದು, ಮರಣ ಹೊಂದಿದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ರೂ.50,000/- ಗಳ ಮರಣ ಪರಿಹಾರವನ್ನು ನೀಡಲಾಗುತ್ತಿದೆ. |

**ಸಂಖ್ಯೆ: ಮಮಇ 45 ಐಸಿಡಿ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ವಿ. ಸಂಕನೂರ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 508ಕ್ಕೆ ಒದಗಿಸಲಾದ ಅನುಬಂಧ | | |
|---|---|---|
| ಕ್ರ. ಸಂ | ಜಿಲ್ಲೆ ಹೆಸರು | ಅಂಗನವಾಡಿ ಕೇಂದ್ರಗಳ ಸಂಖ್ಯೆ |
| 1 | ಬಾಗಲಕೋಟೆ | 2444 |
| 2 | ಬೆಂಗಳೂರು (ಗ್ರಾ) | 1277 |
| 3 | ರಾಮನಗರ | 1586 |
| 4 | ಬೆಂಗಳೂರು (ನ) | 2877 |
| 5 | ಬೆಳಗಾಂ | 5656 |
| 6 | ಬಳ್ಳಾರಿ | 1358 |
| 7 | ಬೀದರ್ | 2051 |
| 8 | ವಿಜಯಪುರ | 2755 |
| 9 | ಚಾಮರಾಜನಗರ | 1444 |
| 10 | ಚಿಕ್ಕಮಗಳೂರು | 1858 |
| 11 | ಚಿತ್ರದುರ್ಗ | 2428 |
| 12 | ದಕ್ಷಿಣ ಕನ್ನಡ | 2131 |
| 13 | ದಾವಣಗೆರೆ | 1771 |
| 14 | ಧಾರವಾಡ | 1622 |
| 15 | ಗದಗ | 1248 |
| 16 | ಕಲಬುರಗಿ | 3420 |
| 17 | ಯಾದಗಿರಿ | 1568 |
| 18 | ಹಾಸನ | 2691 |
| 19 | ಹಾವೇರಿ | 1991 |
| 20 | ಕೋಲಾರ | 2180 |
| 21 | ಚಿಕ್ಕಬಳ್ಳಾಪುರ | 2014 |
| 22 | ಮಡಿಕೇರಿ | 888 |
| 23 | ಕೊಪ್ಪಳ | 1960 |
| 24 | ಮಂಡ್ಯ | 2558 |
| 25 | ಮೈಸೂರು | 2933 |
| 26 | ರಾಯಚೂರು | 2856 |
| 27 | ಶಿವಮೊಗ್ಗ | 2563 |
| 28 | ತುಮಕೂರು | 4199 |
| 29 | ಉಡುಪಿ | 1222 |
| 30 | ಉತ್ತರಕನ್ನಡ | 2782 |
| 31 | ಯಾದಗಿರಿ | 1591 |
| **ಒಟ್ಟು** | | **69922** |